# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಓ ಎಸ್ ನಂ. 122/2016

ಸಾಕ್ಷಿಗೆ ದಿನಾಂಕ 03-07-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1

| | | |
|---|---|---|
| ಹೆಸರು | ಃ | ಹುಸೇನ್ ಭಾಷಾ |
| ತಂದೆಯ ಹೆಸರು | ಃ | ಹರಪನಹಳ್ಳಿ ಇಮಾಂ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಇಂಜಿನಿಯರ್ |
| ವಾಸ ಸ್ಥಳ | ಃ | ಟಿ ಎಂ ಸಿ, ಹೆಚ್ ಬಿ ಹಳ್ಳಿ |

ಮುಖ್ಯ ವಿಚಾರಣೆಃ

ನಾನು ಸನ್ 2022 ರಿಂದ ಹೆಚ್ ಬಿ ಹಳ್ಳಿ ಟಿ ಎಂ ಸಿ ಯಲ್ಲಿ ಇಂಜಿನಿಯರ್ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 04-02-2025 ರಂದು ನಮ್ಮ ಕಚೇರಿಯಿಂದ ಮಾನ್ಯ ನ್ಯಾಯಾಲಯದ ಕಮಿಷನರ್ ವಾರೆಂಟನ್ನು ಪಡೆದುಕೊಂಡಿರುತ್ತೇನೆ. ನಂತರ ನಾನು ದಿಃ05-02-2025 ರಂದು ಈ ದಾವೆಯಲ್ಲಿಯ ವಾದಿ ಮತ್ತು ಪ್ರತಿವಾದಿಯರಿಗೆ ನೋಟೀಸನ್ನು ನೀಡಿರುತ್ತೇನೆ ಮತ್ತು ವಾದಿ ಮತ್ತು ಪ್ರತಿವಾದಿಯರ ಪರ ವಕೀಲರಿಗೆ ನೋಟೀಸನ್ನು ನೀಡಿರುತ್ತೇನೆ. ನಂತರ ದಿಃ 12-02-2025 ರಂದು ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಸ್ಥಾನಿಕವಾಗಿ ಅಳತೆ ಕಾರ್ಯವನ್ನು ಪೂರೈಸಿ, ಮಹಜರನ್ನು ಜರುಗಿಸಿ ಮಾನ್ಯ ನ್ಯಾಯಾಲಯಕ್ಕೆ ಒಟ್ಟು 24 ಪುಟಗಳೊಂದಿಗೆ ಕಮಿಷನರ್ ವರದಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸದರಿ ವರದಿಯನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ಸದರಿ ವರದಿ ನೋಡಿ ಗುರುತಿಸಿದ್ದು ಅದನ್ನು ಒಟ್ಟಾರೆಯಾಗಿ ನಿಸಿ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ನ್ಯಾಯಾಲಯದಿಂದ ಬಂದ ಕಮಿಷನರ್ ವಾರೆಂಟ್ ಪ್ರಕಾರ ನಾನು ಅಳತೆ ಕಾರ್ಯ ಮಾಡಿರುತ್ತೇನೆ. ವಾರೆಂಟಿನಲ್ಲಿ ನಮೂದಿರುವ ಷೆಡ್ಯೂಲಿನಲ್ಲಿ ವಿವರಿಸಿರುವಂತೆ ನಾನು ಕಮೀಷನರ್ ಕಾರ್ಯ ನಿರ್ವಹಿಸಿರುತ್ತೇನೆ. ವಾದಿ ಪರ ವಕೀಲರು ಸಲ್ಲಿಸಿರುವ ಮೆಮೋ ಆಫ್ ಇನ್ಸ್ಟ್ರಕ್ಷನ್ ನ 1ನೇ ಪ್ಯಾರಾದಲ್ಲಿ ಹೇಳಿರುವಂತೆ ಕಾಂಪೌಂಡ್ ಗೋಡೆಯ ಬಗ್ಗೆ ಅಳತೆ ಮಾಡಿ ವರದಿಯಲ್ಲಿ ತಿಳಿಸಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ವರದಿಯಲ್ಲಿ ಸ್ಕೆಚ್ ಸಹಾ

ಹಾಜರುಪಡಿಸಿದ್ದೇನೆ. ಸಾಕ್ಷಿಗೆ ಕಮಿಷನರ್ ವರದಿಯ ನಕಾಶೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಅದರಲ್ಲಿ ಫಿಗರ್ ಎ ಮತ್ತು ಫಿಗರ್ ಬಿ ಅಂತಾ ತೋರಿಸಿದ್ದು ಫಿಗರ್ ಎ ರಲ್ಲಿ ತೋರಿಸಿರುವಂತಹ ಸ್ಥಳ ಕಾಂಪೌಂಡ್ ಗೋಡೆಯಾಗಿರುತ್ತದಂತಾ ಹೇಳಿದ್ದು ಸದರಿ ವರದಿಯಲ್ಲಿ ಸಾಕ್ಷಿಯು ಹೇಳಿರುವಂತಹ ಭಾಗವನ್ನು ನಿಸಿ-1ಎ ಎಂದು ಗುರುತಿಸಲಾಯಿತು. ಸದರಿ ಕಾಂಪೌಂಡ್ ಗೋಡೆ ಎನ್ನುವ ಬಗ್ಗೆ ನಾನು ಸದರಿ ಸ್ಕೆಚ್ ನಲ್ಲಿ ಬರೆದಿರುವುದಿಲ್ಲ. ಸದರಿ ಕಾಂಪೌಂಡ್ ಗೋಡೆ ಇರುವ ಪ್ಲಾಟಿನ ನಂಬರ್ ನಾನು 80 ಅಂತಾ ತೋರಿಸಿದ್ದೇನೆ. ಕಮಿಷನರ್ ವಾರೆಂಟಿನಲ್ಲಿ ಆಸ್ತಿ ನಂ.81 ಅಂತಾ ನಮೂದು ಇದೆ ಸಾಕ್ಷಿ ಮುಂದುವರೆದು ಅದು ತಪ್ಪಾಗಿ ನಮೂದಾಗಿದೆ ಎನ್ನುತ್ತಾರೆ. ನಾನು ಕಮಿಷನರ್ ವರದಿಯ ನಕಾಶೆಯಲ್ಲಿ ಆಸ್ತಿ ನಂ.81 ರ ಉತ್ತರ ದಿಕ್ಕಿಗೆ ಕಾಮನ್ ವಾಲ್ (ಹುದುವಿನ ಗೋಡೆ) ಅಂತಾ ತೋರಿಸಿರುತ್ತೇನೆ. ಸದರಿ ಹುದುವಿನ ಗೋಡೆ ಯಾರ್ಯಾರಿಗೆ ಸೇರಿದ ಅದರ ವಿಸ್ತೀರ್ಣ ಮತ್ತು ಅಗಲ ಹಾಗೂ ಉದ್ದ ಎಷ್ಟು ಇದೆ ಅಂತಾ ನಕಾಶೆಯಲ್ಲಿ ತೋರಿಸಿದ್ದೀರಾ ಎಂದರೆ ಸಾಕ್ಷಿಯು ಕಮಿಷನರ್ ವಾರೆಂಟಿನಲ್ಲಿ ಶೆಡ್ಯೂಲ್ ಅಂತಾ ಅಷ್ಟೇ ನಮೂದು ಇದ್ದು ವಿವರಣೆ ನೀಡುವ ಬಗ್ಗೆ ನಿರ್ದೇಶನಗಳು ಇರಲಿಲ್ಲವೆನ್ನುತ್ತಾರೆ. ಆ ರೀತಿ ನೀವು ವಿವರಣೆಗಳನ್ನು ನೀಡಬೇಕು ನಿರ್ದೇಶನ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಕಾಶೆಯಲ್ಲಿ ಆಸ್ತಿ ನಂ.80 ಮತ್ತು ಆಸ್ತಿ ನಂ.81 ಯಾರಿಗೆ ಸೇರಿದ್ದವು ಎಂದು ನಾನು ತೋರಿಸಿರುವುದಿಲ್ಲ. ಅದೇ ರೀತಿ ಸದರಿ ನಕಾಶೆಯಲ್ಲಿ ಫಿಗರ್ ಬಿ ದಲ್ಲಿ ಆಸ್ತಿ ನಂ.81 ಅಂತಾ ಕಣ್ತಪ್ಪಿನಿಂದ ನಮೂದಾಗಿದೆ. ಸರಿಯಾದ ರೀತಿಯಿಂದ ಅಳತೆ ಕಾರ್ಯ ನಿರ್ವಹಿಸದೇ ಅಪೂರ್ಣ ಮಾಹಿತಿಯ ಸುಳ್ಳು ನಕಾಶೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸದರಿ ನಕಾಶೆಯಲ್ಲಿ ನಾನು ಕಾಂಪೌಂಡ್ ವಾಲನ್ನು ತೋರಿಸಿರುವುದಿಲ್ಲವೆಂದರೆ ಸರಿಯಲ್ಲ. ನಾನು ಕಾಂಪೌಂಡ್ ವಾಲ್ ತೋರಿಸಿರುತ್ತೇನಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಕಮಿಷನರ್ ವರದಿಯ ಪ್ರಕಾರ ಅಸಲು ದಾವಾ ನಂ.122/2016 ಕ್ಕೆ ಸಂಬಂಧಿಸಿದ ಪ್ಲಾಟ್ ನಂ.81 ರ ಕುರಿತು ನೀವು ಅಳತೆ ಕಾರ್ಯವನ್ನು ನಿರ್ವಹಿಸಿಲ್ಲವೆಂದರೆ ಸರಿಯಲ್ಲ. ಪ್ಲಾಟ್ ನಂ.81 ಕ್ಕೆ ಸಂಬಂಧಿಸಿದಂತೆ ನೀವು ನಕಾಶೆಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು 2 ಪ್ಲಾಟಿಗೆ ಸಂಬಂಧಿಸಿದಂತೆ ಒಂದೇ ನಕಾಶೆ ನೀಡಿರುತ್ತೇನೆ ಎನ್ನುತ್ತಾರೆ.

ನಿಮ್ಮ ಕಮಿಷನರ್ ವರದಿಯ ಪುಟ ನಂ.3 ರಲ್ಲಿ "ಹುದುವಿನ ಗೋಡೆಯಿಂದ ಕಾಂಪೌಂಡಿನವರೆಗೆ ಅಳತೆ ಮಾಡಿದಾಗ 20 ಅಡಿ 9 ಇಂಚು ಅಳತೆ ಇದ್ದು ಅದರಿಂದ ಸದರಿ ಅಳತೆಯಲ್ಲಿ 9 ಇಂಚು ವ್ಯತ್ಯಾಸ ಇದ್ದು 21 ಅಡಿಗಳ ಬದಲಾಗಿ 21 ಅಡಿ 9 ಇಂಚು ಇದ್ದು" ಅಂತಾ ಬರೆದಿದ್ದು ಸದರಿ 9 ಇಂಚು ಯಾವುದರಲ್ಲಿ ಅತಿಕ್ರಮಣವಾಗಿದೆ ಎಂದರೆ ಸಾಕ್ಷಿಯು

ಕಾಂಪೌಂಡ್ ಗೋಡೆಯಲ್ಲಿ ಅತಿಕ್ರಮಣವಾಗಿದೆ ಅಂತಾ ಹೇಳುತ್ತಾರೆ. ಆಸ್ತಿ ನಂ.81 ರ ಕಾಂಪೌಂಡ್ ಗೋಡೆಯ ಉದ್ದ 42 ಅಡಿ ಅಗಲ 4 ಇಂಚು ಇರುತ್ತದೆ. 9 ಇಂಚಿನಲ್ಲಿ 4 ಇಂಚು ಜಾಗ ಹೋದರೆ ಇನ್ನು 5 ಇಂಚು ಜಾಗ ಉಳಿಯುತ್ತದೆಂದರೆ ಸರಿ. ಸದರಿ 5 ಇಂಚು ಉಳಿದ ಜಾಗ ಪ್ಲಾಟ್ ನಂ.81 ಮತ್ತು ಪ್ಲಾಟ್ ನಂ.80 ರಲ್ಲಿ ಸೇರಿ ಬರುತ್ತದೆನ್ನುತ್ತಾರೆ. ಸದರಿ ವಿಚಾರವನ್ನು ನನ್ನ ವರದಿಯಲ್ಲಿ ತೋರಿಸಿಲ್ಲ. ಸದರಿ 5 ಇಂಚು ಜಾಗ ವಾದಿಯ ಆಸ್ತಿಯಲ್ಲೇ ಬರುತ್ತದೆಂದರೆ ಸರಿಯಲ್ಲ. ನನ್ನ ಕಮಿಷನರ್ ವರದಿಯ ನಕಾಶೆಯಲ್ಲಿ ಪ್ಲಾಟ್ ನಂ.80 ಅಂತಾ ತೋರಿಸಿರುವುದು ಪ್ಲಾಟ್ ನಂ.81 ಆಗಬೇಕು ಮತ್ತು ಪ್ಲಾಟ್ ನಂ.81 ಇದ್ದಿದ್ದು ಪ್ಲಾಟ್ ನಂ.80 ಆಗಬೇಕು ಎನ್ನುತ್ತಾರೆ. ಪ್ಲಾಟ್ ನಂ.80 ಮತ್ತು ಪ್ಲಾಟ್ ನಂ.81 ರ ಚಕ್ಕುಬಂದಿಯನ್ನು ಹೇಳಬಹುದು. ಪ್ಲಾಟ್ ನಂ.80 ರ ಚಕ್ಕುಬಂದಿ ಪೂಃರಸ್ತೆ, ಪಃ ಸಣ್ಣ ರಸ್ತೆ, ಉಃ ಎರಡೂ ಆಸ್ತಿಯ ನಡುವೆ ಕಾಮನ್ ವಾಲ್ ಹಾಗೂ ದಃಕಾಮನ್ ವಾಲ್ ಬರುತ್ತದೆ. ಪ್ಲಾಟ್ ನಂ.81 ರ ಚಕ್ಕುಬಂದಿ ಪೂಃರಸ್ತೆ, ಪಃ ಸಣ್ಣ ರಸ್ತೆ, ಉಃ ಕಾಂಪೌಂಡ್ ಗೋಡೆ ಹಾಗೂ ದಃಕಾಮನ್ ವಾಲ್ ಬರುತ್ತದೆ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ